

ನನ್ನ ಮಗ ವಿವೇಕನನ್ನು ವೈದ್ಯರ ಬಳಿ ತೋರಿಸಲೆಂದು ಆಸ್ಪತ್ರೆಗೆ ಕರೆತಂದಿದ್ದೆ. ಏಕೋ ವಾರದಿಂದ ಅವನಿಗೆ ಆಗಾಗ ಹೊಟ್ಟೆನೋವು ಕಾಡುತ್ತಿತ್ತು. ನಾನೂ ಮನೆಮದ್ದು ಮಾಡಿ ನೋಡಿದೆ, ಏನೂ ಪ್ರಯೋಜನವಾಗಲಿಲ್ಲ. ಈ ವೈದ್ಯರ ಕೈಗುಣ ಚೆನ್ನಾಗಿತ್ತು; ಫೀಜೂ ಕಡಿಮೆ. ಹಾಗಾಗಿ ನನ್ನ ಪತಿ ಆಸ್ಪತ್ರೆಯ ಬಳಿ ಇಳಿಸಿ ಹೋಗಿದ್ದರು. ಅವರು ತಮ್ಮದೇ ಆಟೊ ಚಾಲಕರು. ಗಿರಾಕಿಗಳು ಸಿಕ್ಕ ದಿನ ಎಲ್ಲರಿಗೂ ಹೊಟ್ಟೆ ತುಂಬಾ ಊಟ, ಇಲ್ಲವಾದರೆ ಅರ್ಧ ಹೊಟ್ಟೆಗೆ ಮಾತ್ರ!

ಹಿರಿಯ ಮಗಳು ವಿಂಧ್ಯಾ ಶಾಲೆಗೆ ಹೋಗಿದ್ದಳು. ಅವಳೀಗ ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದಾಳೆ. ಚುರುಕಾಗಿ ಓದುವ ಹುಡುಗಿ. ಅವಕಾಶ ಸಿಕ್ಕರೆ, ತುಂಬಾ ಓದಿ ಡಾಕ್ಟರಾಗುವ ಆಸೆ ಅವಳಿಗೆ. ನಾನು, ನನ್ನ ಮಕ್ಕಳು ಓದುವ ಶಾಲೆಯಲ್ಲೇ ಆಯಾ ವೃತ್ತಿ ಮಾಡುತ್ತಿದ್ದೇನೆ. ನನಗೆ ಬರುವ ಅತ್ಯಲ್ಪ ಸಂಬಳವನ್ನು ಅವರಿಬ್ಬರ ವಿದ್ಯಾಭ್ಯಾಸಕ್ಕೆಂದೇ ಉಳಿತಾಯ ಮಾಡುತ್ತಿದ್ದೇನೆ. ಹಾಗಾಗಿ ನನ್ನ ಗಂಡನ ಸಂಪಾದನೆಯಲ್ಲೇ ಸಂಸಾರ ತೂಗಿಸಬೇಕು.

ನನ್ನ ಯೋಚನಾಲಹರಿ ತುಂಡಾದದ್ದು, ಪಕ್ಕದಲ್ಲಿ ಕುಳಿತ ಹೆಣ್ಣು ಮುಸಿಮುಸಿ ಅಳುತ್ತಿದ್ದುದು ಕಿವಿಗೆ ಬಿದ್ದಾಗ. ಪಾಪ! ಚಿಕ್ಕ ವಯಸ್ಸಿನ ಹುಡುಗಿ; ಯಾಕೋ ತುಂಬಾ ದುಃಖದಲ್ಲಿದ್ದಳು. ಏನೆಂದು ವಿಚಾರಿಸಬೇಕೆನಿಸಿ ಅವಳ ಭುಜದ ಮೇಲೆ ಕೈಯಿಟ್ಟು ಕೇಳಿದೆ, 'ಏಕಮ್ಮಾ, ಏನು ತೊಂದರೆ? ಯಾಕಿಷ್ಟು ಅಳುತ್ತಿದ್ದಿ?'

ಯಾರ ಬಳಿಯಾದರೂ ಹೇಳಿಕೊಳ್ಳಬೇಕೆನಿಸಿತ್ತೋ ಏನೋ ಅವಳಿಗೆ... ನನ್ನೆಡೆಗೆ ತಿರುಗಿ ಹೇಳಿದಳು, 'ಏನೆಂದು ಹೇಳಲಿ ಅಮ್ಮಾ... ನನ್ನದೊಂದು ಗೋಳಿನ ಕಥೆ. ಈಗ ಹತ್ತು ವರ್ಷದ ಹಿಂದೆ ನಾವು ಪ್ರೀತಿಸಿ ಮದುವೆಯಾದೆವು. ಬೇರೆ ಬೇರೆ ಜಾತಿ; ಹಾಗಾಗಿ ನನ್ನ ಹೆತ್ತವರು ನನ್ನನ್ನು ಮನೆಗೆ ಸೇರಿಸಿಲ್ಲ. ಅತ್ತೆಯ ಮನೆಯವರಿಗೆ ನನ್ನನ್ನು ಕಂಡರೆ ಅಷ್ಟಕ್ಕಷ್ಟೆ. ಎಲ್ಲರಿಗೂ ಬೇಯಿಸಿ ಹಾಕಲು ನಾನೊಬ್ಬ ಊಳಿಗದವಳು ಅಷ್ಟೆ. ಏನೆಲ್ಲಾ ಪ್ರಯತ್ನ ನಡೆಸಿದರೂ ನಮಗೆ ಮಕ್ಕಳಾಗಿಲ್ಲ. ನೋಡದ ವೈದ್ಯರಿಲ್ಲ, ಹೋಗದ ಗುಡಿಯಿಲ್ಲ, ಮಾಡದ ವ್ರತವಿಲ್ಲ. ಆದರೂ ಆ ದೈವ ಕೃಪೆ ನನ್ನ ಮೇಲಿಲ್ಲ. ಈಗ ನನ್ನ ಗಂಡನಿಗೆ ಇನ್ನೊಂದು ಮದುವೆ ಮಾಡುವ ಹುನ್ನಾರ ಹಾಕಿದ್ದಾರೆ ನನ್ನ ಅತ್ತೆ. ನನ್ನವರೇನೋ ನನ್ನನ್ನು ತುಂಬಾ ಪ್ರೀತಿಸುತ್ತಾರೆ. ಅವರಿಗೆ ಯಾರೋ ಹೇಳಿದ್ದಾರೆ, ಈ ಆಸ್ಪತ್ರೆಯ ಸ್ತ್ರೀ ವೈದ್ಯರು 'ಬಾಡಿಗೆ ತಾಯಿ'ಯರಲ್ಲಿ ಗರ್ಭ ನೆಡುವುದರಲ್ಲಿ ನಿಪುಣೆಯೆಂದು. ಬಾಡಿಗೆ ತಾಯಿಯರ ಫಲವತ್ತಾದ ಗರ್ಭದಲ್ಲಿ ಪತಿ–ಪತ್ನಿಯರ ಅಂಡಾಣು–ವೀರ್ಯಾಣುಗಳನ್ನು ನೆಟ್ಟು, ಒಂಬತ್ತು ತಿಂಗಳಾದ ಮೇಲೆ ಮಗುವನ್ನು ನಾವು ಪಡೆಯಬಹುದಂತೆ. ಬೇರೊಂದು ಮಗುವನ್ನು ದತ್ತು ತೆಗೆದುಕೊಳ್ಳುವುದಕ್ಕಿಂದ ಇದು ಒಳ್ಳೆಯ ವ್ಯವಸ್ಥೆ ಅಲ್ಲವೆ? ನಮ್ಮದೇ ಅನುವಂಶಿಕ ಧಾತು ಉಳ್ಳ ಮಗು ನಮಗೆ ಸಿಗುತ್ತದೆಯಲ್ಲ! ಹಣ ಸ್ವಲ್ಪ ಹೆಚ್ಚಾಗಿ ಕೊಡಬೇಕು. ಆದರೂ ಪ್ರಯತ್ನಿಸೋಣ ಎಂದು ಇಲ್ಲಿ ಕರೆತಂದಿದ್ದಾರೆ ನನ್ನ ಪತಿ. ಇನ್ನು ಈ ಯತ್ನ ಏನಾಗುವುದೋ... ನನ್ನ ಅದೃಷ್ಟ ಹೇಗಿದೆಯೋ!' ಎಂದು ಮತ್ತೆ ಬಿಕ್ಕಿದಳು.

'ಯೋಚಿಸಬೇಡಮ್ಮ, ಕಣ್ಣೊರೆಸಿಕೋ, ಆ ಭಗವಂತನಲ್ಲಿ ನಂಬಿಕೆಯಿಡು. ಅವನು ಏನಾದರೂ ದಾರಿ ತೋರಿಸುತ್ತಾನೆ. ಬಾಡಿಗೆ ತಾಯಿಯರಿಗೂ ಹಣದ ಅಗತ್ಯವಿರುತ್ತದಲ್ಲ. ಹಾಗಾಗಿ ನಿನಗೆ ಯಾರಾದರೂ ಸಿಗುತ್ತಾರೆ, ಮಗುವನ್ನು ಹೆತ್ತು ಕೊಡುತ್ತಾರೆ' ಎಂದು ಸಮಾಧಾನಪಡಿಸಿದೆ.

ಅಷ್ಟರಲ್ಲಿ ನಾನು ನೋಡಬೇಕಾದ ವೈದ್ಯರ ಕರೆ ಬಂದದ್ದಕ್ಕೆ ನಾನು ಮಗುವಿನೊಂದಿಗೆ ಒಳಹೋದೆ. ಅವರು ನನ್ನ ಮಗನನ್ನು ಪರೀಕ್ಷಿಸಿ, 'ಹೊಟ್ಟೆಯ ಸೋಂಕಿನಿಂದಾಗಿ ನೋವು ಕಾಣಿಸಿಕೊಳ್ಳುತ್ತಿದೆ, ಔಷಧಿ ಕೊಡುತ್ತೇನೆ ಸುಶೀಲಮ್ಮ, ನಿತ್ಯ ಎರಡು ಬಾರಿ ಕೊಡಿ, ಒಂದು ವಾರದ ನಂತರ ಬಂದು ನೋಡಿ' ಎಂದರು. ಆಸ್ಪತ್ರೆಗೆ ಸೇರಿದಂತೆ ಇದ್ದ ಔಷಧಿ ಅಂಗಡಿಯಲ್ಲಿ ಮಾತ್ರೆ, ಸಿರಪ್‌ಗಳನ್ನು ಖರೀದಿಸಿ ಪತಿಗೆ ಫೋನ್ ಮಾಡಿದೆ. ಅವರು ಆಟೊದಲ್ಲಿ ನಮ್ಮನ್ನು ಮನೆ ತಲುಪಿಸಿದರು. ಆ ದಿನ ಶಾಲೆಗೆ ರಜೆ ಪಡೆದಿದ್ದೆನಾದ್ದರಿಂದ, ಮನೆಗೆಲಸ ಮುಗಿಸಿ ಮಗನ ಪಕ್ಕದಲ್ಲಿ ನಾನೂ ಅಡ್ಡಾದೆ.

ಮನಸ್ಸೇಕೋ ಸ್ಥಿಮಿತದಲ್ಲೇ ಇರಲಿಲ್ಲ, ಏನೇನೋ ಯೋಚನೆಗಳು... ಕನಸುಗಳು... ಆ ಹುಡುಗಿ ಹೇಳಿದ ವಿಚಾರ ಮನಸ್ಸು ಕೊರೆಯುತ್ತಿತ್ತು. ಅವಳಂತಹ ಅದೆಷ್ಟು ಹೆಣ್ಮಕ್ಕಳು ಸಂತಾನಭಾಗ್ಯವಿಲ್ಲದೆ ಪರಿತಪಿಸುತ್ತಿದ್ದಾರೋ! ನಿತ್ಯವೂ ಮನೆಯವರಿಂದ 'ಬಂಜೆ' ಎಂಬ ಪಟ್ಟಕ್ಕೆ ಗುರಿಯಾಗುತ್ತಾ, ಅದೇ ಕಾರಣಕ್ಕೆ ಸವತಿಯರನ್ನು ಸಹಿಸಿಕೊಳ್ಳುತ್ತಾರೆ. ಇನ್ನು ಕೆಲವರಿಗೆ ಗರ್ಭಾಶಯ ದುರ್ಬಲವಾಗಿರುವುದರಿಂದ ಹೆರಿಗೆ ಕಷ್ಟವಾಗುವುದು; ಅನೇಕ ಬಾರಿ ಗರ್ಭಪಾತವಾಗುವ ಮಹಿಳೆಯರೂ ವಿರಳವಲ್ಲ.

ದತ್ತು ಪಡೆದ ಮಕ್ಕಳು ತಮ್ಮನ್ನು ಪ್ರೀತಿಸುತ್ತಾರೋ ಇಲ್ಲವೋ ಎಂಬ ಶಂಕೆಯಿಂದ, ಅದಕ್ಕೂ ಹಿಂದೇಟು ಹಾಕುವವರಿದ್ದಾರೆ. ಇದೀಗ ಬಂದಿರುವ ಈ 'ಬಾಡಿಗೆ ತಾಯಿ' ವ್ಯವಸ್ಥೆ ಇಂತಹವರಿಗೆಲ್ಲಾ ವರವೇ ಸರಿ. ಮೂತ್ರಪಿಂಡ ದಾನ, ನೇತ್ರದಾನ, ಅಂಗಾಂಗಗಳ ದಾನ ಇವುಗಳಂತೆಯೇ 'ಗರ್ಭದಾನ' ಕೂಡ ಒಂದು ರೀತಿಯ ಸಮಾಜಸೇವೆಯೇ ಅಲ್ಲವೆ? ಗರ್ಭಧಾರಣೆಯಿಂದ ದೇಹಕ್ಕಾಗುವ ದುರ್ಬಲತೆ, ಅನ್ಯದೇಹದ ಅಣುಗಳಿಂದಾಗಬಹುದಾದ ದುಷ್ಪರಿಣಾಮ, ಜೀವಹೋಗಬಹುದಾದ 'ರಿಸ್ಕ್' ಸಹಿಸಿಕೊಂಡು, ಬಾಡಿಗೆ ತಾಯಂದಿರು ಈ ದಾನಕ್ಕೆ ಮುಂದಾಗುವರೆಂದರೆ ಅವರಿಗೊಂದು 'ಸಲಾಂ' ಹಾಕಲೇಬೇಕು.

ನನ್ನ ಮನದಲ್ಲೇನೋ ಒಂದು ಅಪೇಕ್ಷೆ ಉದ್ಭವಿಸಿತು. ಹಣಕ್ಕಾಗಿ, ಹುಟ್ಟಿದ ಮಕ್ಕಳನ್ನೇ ಮಾರುವವರಿದ್ದಾರೆ. ಆದರೆ ಮತ್ತೊಬ್ಬರ ಮನೆಯಲ್ಲಿ–ಮನಗಳಲ್ಲಿ ನಗುವನ್ನು–ಸಂತೋಷವನ್ನು ಉಂಟುಮಾಡುವ ಕಂದನನ್ನು ನಾನೇಕೆ ಹೆತ್ತುಕೊಡಬಾರದು? ದೇವರ ಕೃಪೆಯಿಂದ ಮೂವತ್ತೈದರಲ್ಲೂ ನನ್ನ ಆರೋಗ್ಯ ಚೆನ್ನಾಗಿಯೇ ಇದೆ. ಈ ವ್ಯವಸ್ಥೆಯಿಂದ ನನಗೆ ದೊರಕುವ ಧನವನ್ನು ನನ್ನ ಸಂಸಾರದ ನಿರ್ವಹಣೆಗೆ ಬಳಸಬಹುದಲ್ಲವೆ? ನನ್ನ ಮಕ್ಕಳಿಗೆ ಒಳ್ಳೆಯ ಊಟ–ಬಟ್ಟೆ–ವಿದ್ಯೆ ಕೊಟ್ಟು ಸಲಹಲು ಅನುಕೂಲವಾದೀತು?

ಹೀಗೆ ಯೋಚಿಸಿದವಳು, ಸಂಜೆ ನನ್ನ ಮಗಳು ಶಾಲೆಯಿಂದ ಹಿಂತಿರುಗಿದ ಮೇಲೆ ಅವಳಿಗೆ ಮಗನ ಜವಾಬ್ದಾರಿ ವಹಿಸಿ, ನಾನು ಮತ್ತೆ ಆಸ್ಪತ್ರೆಗೆ ಹೋದೆ. ಅಲ್ಲಿನ ಸ್ತ್ರೀ ವೈದ್ಯರು ಈ ಪ್ರಕ್ರಿಯೆಯಲ್ಲಿ ನೈಪುಣ್ಯ

